ಹೋಟೆಲಿಗೆ ಹೋಗಿದ್ದೆ, ಸ್ಟ್ಯಾಂಡಿಂದ ಎತ್ತಿಕೊಂಡು ಬಂದೆ. ಇದು ನಿನ್ನದೇ ಆಗಿರಬಹುದೇನೋ! ಯಾರಿಗೊತ್ತು? ನಿನ್ನದೇ ಆಗಿದ್ದರೆ ಸಾರಿ ಕಣಪ್ಪ. ನೀನೇ ಇಟ್ಟುಕೊ. ಜುಜುಬಿ ಛತ್ರಿಗೆಲ್ಲಾ ಪೊಲೀಸು, ಕೋರ್ಟು, ಕಚೇರಿ ಅಂತೆಲ್ಲ ಏಕೆ? ಅಲ್ವ?"

"ಅದು ನನ್ನದೇ. ಕಿಂಚಿತ್ತೂ ಅನುಮಾನವಿಲ್ಲ." ಸೋಫಿ ಖಚಿತವಾಗಿ ಹೇಳಿದ.

"ಗುಡ್. ನಿನ್ನದೇ ಅಂತಾದರೆ ನೀನೇ ಇಟ್ಟುಕೊ. ಗೊತ್ತಿಲ್ಲದೆ ನಡೆದ ಕೃತ್ಯಕ್ಕೆ ಕ್ಷಮೆ ಇರಲಿ." ಎನ್ನುತ್ತಾ ಅವನು ಅಲ್ಲಿಂದ ಅವಸರವಸರದಿಂದ ಹೊರಟು ಹೋದ.

ಸಿಗಾರ್ ಸೇದುತ್ತಿದ್ದ ಗಣ್ಯವ್ಯಕ್ತಿ ಇಷ್ಟು ಬೇಗ ಸೋಲೊಪ್ಪಿದ್ದನ್ನು ನೋಡಿ ಸೋಫಿಗೆ ತುಂಬಾ ನಿರಾಶೆಯಾಯ್ತು. ಅವನು ಸಿಟ್ಟಿನಿಂದ ಛತ್ರಿಯನ್ನು ಎತ್ತಿ ಚರಂಡಿಗೆ ಎಸೆದ. ಈ ಜಗತ್ತು ತಾನು ಎಷ್ಟು ಕೆಟ್ಟವನಾಗಲು ಪ್ರಯತ್ನಿಸಿದರೂ ಏಕೆ ಸಂತನನ್ನಾಗಿ ಮಾಡಲು ಪೇಚಾಡುತ್ತಿದೆ? ಈ ದರಿದ್ರ ಸಮಾಜ ತನ್ನಂತ ಒಬ್ಬ ನಿಕೃಷ್ಟ ಅಪರಾಧಿಯನ್ನು ಕಾನೂನಿನ ವಶಕ್ಕೆ ಒಪ್ಪಿಸಲು ಯಾಕೆ ಹಿಂದೆ ಮುಂದೆ ನೋಡುತ್ತಿದೆ? ಹಿಜ್ಡಾಗಳು!

ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಸೋಫಿ ಮತ್ತೆ ಮ್ಯಾಡಿಸನ್ ಚೌಕದ ತನ್ನ ಮಾಮೂಲಿ ಬೆಂಚಿನ ಕಡೆಗೆ ನಿಧಾನವಾಗಿ ಹೆಜ್ಜೆಹಾಕತೊಡಗಿದ. ಹೋಗುತ್ತಾ ದಾರಿಯಲ್ಲಿ ಅವನಿಗೊಂದು ಪುರಾತನ ಚರ್ಚು ಎದುರಾಯಿತು. ಒಳಗಿನಿಂದ ಸುಮಧುರವಾದ ಆರ್ಗನ್ ನುಡಿಸುತ್ತಿರುವ ಸಂಗೀತ ಕೇಳಿಸುತ್ತಿತ್ತು. ಯಾರೋ ವಾದಕ ಮುಂದಿನ ಭಾನುವಾರದ ಪೂಜೆಗೆಂದು ಅಭ್ಯಾಸ ನಡೆಸುತ್ತಿದ್ದ.

ಸಂಗೀತದ ಮಾಧುರ್ಯಕ್ಕೆ ಮಂತ್ರಮುಗ್ಧನಾದವನಂತೆ ಸೋಫಿ ಅಲ್ಲೇ ಮರಗಟ್ಟಿದಂತೆ ನಿಂತುಕೊಂಡ. ಯಾರೋ ಕವಿ ವರ್ಣಿಸಿದಂತೆ, ಸ್ವಚ್ಛವಾದ ಬಾನೆಂಬ ತೊಟ್ಟಿಲಿನಲ್ಲಿ ಚಂದ್ರ ತೂಗುತ್ತಿರುವಂತಹ ಪ್ರಶಾಂತ ವಾತಾವರಣ. ವಾಹನಗಳ ಸದ್ದೇ ಇರಲಿಲ್ಲ. ಇಂಥ ಒಂದು

